ಬೆಂಗಳೂರು ಮತ್ತು ಇತರ ಜಿಲ್ಲಾಕೇಂದ್ರಗಳಲ್ಲಿ ಚಿಂದಿಹೆಕ್ಕುವ ಅನಾಥ ಮಕ್ಕಳ ಅಭಿವೃದ್ಧಿ

608(6323) : ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಬೆಂಗಳೂರು ಮತ್ತು ಇತರ ಜಿಲ್ಲಾ ಕೇಂದ್ರಗಳಲ್ಲಿರುವ ಚಿಂದಿ ಹೆಕ್ಕುವ ಬೀದಿ ಮಕ್ಕಳೆಷ್ಟು?

2) ಇವರ ಅಭಿವೃದ್ಧಿಗಾಗಿ ಶಿಕ್ಷಣ ಹಾಗೂ ಉದ್ಯೋಗಾವಕಾಶ ನೀಡುವ ಯೋಜನೆಯಿದೆಯೆ: ಇಲ್ಲದಿದ್ದಲ್ಲಿ ಅವರನ್ನು ನಾಗರೀಕರನ್ನಾಗಿ ಮಾಡಲು ಅಡ್ಡಿಪಡಿಸಿದಂತಾಗುವುದಿಲ್ಲವೆ:

3) ಮಾಗಡಿ ರೋಡಿನ ಬೆಗ್ಗರ್ಸ್ ಕಾಲೋನಿಯಲ್ಲಿ ಇವರಿಗೆ ಶಿಕ್ಷಣ ಹಾಗೂ ಉದ್ಯೋಗಾವಕಾಶಕ್ಕಾಗಿ ಕ್ರಮ ಕೈಗೊಳ್ಳಲಾಗುವುದೇ?

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವರು):

1) ಬೆಂಗಳೂರು ನಗರದಲ್ಲಿ 6 ರಿಂದ 18 ವಯೋಮಿತಿಯ 17685 ಬೀದಿ ಮಕ್ಕಳು ಇರುವರೆಂದು 2003–04ರ ಸಮೀಕ್ಷೆಯಲ್ಲಿ ತಿಳಿದುಬಂದಿದೆ. ಇತರೆ ಜಿಲ್ಲೆಗಳಲ್ಲಿ ಈ ಮಕ್ಕಳ ಬಗ್ಗೆ ಸಮೀಕ್ಷೆ ನಡೆಸಿರುವುದಿಲ್ಲ.

2) ಬೀದಿ ಮಕ್ಕಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರವು ಸಮಗ್ರ ಬೀದಿ ಮಕ್ಕಳ ಕೇಂದ್ರ ಯೋಜನೆಯನ್ನು ಜಾರಿಗೆ ತಂದಿದೆ. ಈ ಯೋಜನೆಯನ್ವಯ ಮಕ್ಕಳಿಗೆ ಆಶ್ರಯ, ಆಹಾರ, ಅನೌಪಚಾರಿಕ ಶಿಕ್ಷಣ, ಆರೋಗ್ಯ ಸೇವೆಗಳು, ವೃತ್ತಿ ತರಬೇತಿ ನೀಡಿ ಸಮಾಜದ ಮುಖ್ಯವಾಹಿನಿಗೆ ತರಲಾಗುವುದು.

3) ಕರ್ನಾಟಕ ಭಿಕ್ಷಾಟನೆ ನಿಷೇಧ ಕಾಯಿದೆ 1975 ಸೆಕ್ಷನ್ 3ರನ್ವಯ ಕರ್ನಾಟಕದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಭಿಕ್ಷಾಟನೆಯನ್ನು ನಿಷೇಧಿಸಲಾಗಿದೆ. ಈ ಕಾಯಿದೆಯನ್ನು ಉಲ್ಲಂಘಿಸಿ ಭಿಕ್ಷೆ ಬೇಡುವವರನ್ನು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯಲ್ಲಿರುವ ನಿರಾಶ್ರಿತರ ಪರಿಹಾರ ಕೇಂದ್ರದ ಸಿಬ್ಬಂದಿ ಹಾಗೂ ಪೋಲಿಸ್ ಸಿಬ್ಬಂದಿಯವರು ದಸ್ತಗಿರಿ ಮಾಡಬಹುದು. 16 ವರ್ಷ ವಯಸ್ಸುತುಂಬದೆ ಇರುವ ಹುಡುಗ ಅಥವಾ 18 ವರ್ಷ ವಯಸ್ಸು ತುಂಬದೆ ಇರುವ ಹುಡುಗಿಯರು ಈ ಕಾಯಿದೆಯಿಂದ ಹೊರತಾಗಿರುತ್ತಾರೆ. ಆದ್ದರಿಂದ ಚಿಂದಿ ಹೆಕ್ಕುವ ಬೀದಿ ಮಕ್ಕಳಿಗೆ ಶಿಕ್ಷಣ ಹಾಗೂ ಉದ್ಯೋಗ ತರಬೇತಿ ಯೋಜನೆ ಮಾಗಡಿ ರೋಡಿನ ಬೆಗ್ಗರ್ಸ್ ಕಾಲೋನಿಯಲ್ಲಿ ಇರುವುದಿಲ್ಲ.

ಶ್ರೀ ಎಂ.ಟಿ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಾನು, 'ಈ ರಾಜ್ಯದಲ್ಲಿ ಎಷ್ಟು ಜನ ಚಿಂದಿ ಆಯತಕ್ಕಂಥ ಮಕ್ಕಳಿದ್ದಾರೆ? ಅವರ ಒಂದು ಸ್ಟ್ಯಾಟಿಸ್ಟಿಕ್ಸ್ ಕೊಡಿ' ಎಂಬ ಪ್ರಶ್ನೆ ಕೇಳಿದ್ದೆ. ಆದರೆ, ಅವರು ಕೇವಲ ಬೆಂಗಳೂರಿಗೆ ಮಾತ್ರ ಸೀಮಿತವಾಗಿ ಕೊಟ್ಟಿದ್ದಾರೆ. ಬೆಂಗಳೂರಿನಲ್ಲಿ 1768 5 ಜನ ಬೀದಿ ಮಕ್ಕಳಿದ್ದಾರೆಂದು ಉತ್ತರ ಕೊಟ್ಟಿದ್ದಾರೆ. ಈ ರಾಜ್ಯದಲ್ಲಿ ಎಷ್ಟಿದ್ದಾರೆಂದು ನಮ್ಮ ಪ್ರಶ್ನೆ ಇದೆ. ರಾಜ್ಯ ಮತ್ತು ಜಿಲ್ಲಾ ಹಾಗೂ ತಾಲ್ಲೂಕು ಮಟ್ಟಗಳಲ್ಲಿ ಇರುವ ಅನೇಕ ಮಕ್ಕಳು ಬೀದಿಯಲ್ಲಿ ಚಿಂದಿಯನ್ನು ಆಯ್ದು ತಮ್ಮ ತಮ್ಮ ಜೀವನ ಮಾಡುತ್ತಿದ್ದಾರೆ. ಅದರ ಮಾಹಿತಿ ನಮಗೆ ಸಿಕ್ಕಿಲ್ಲ. ಜೊತೆಗೆ, ಮಾನ್ಯ ಸಚಿವರು ಹೇಳಿದ ಹಾಗೆ, ಮಕ್ಕಳಿಗೆ ಆಹಾರ, ಶಿಕ್ಷಣ, ಆರೋಗ್ಯ ಸೇವೆಯನ್ನು ನೀಡುತ್ತಿದ್ದೇವೆಂದು ಹೇಳುತ್ತಿದ್ದಾರೆ, ಎಷ್ಟು ಜನರಿಗೆ ನೀಡುತ್ತಿದ್ದಾರೆಂದು ಎಂಬ ಮಾಹಿತಿ ಇಲ್ಲ. ಅವರು ಎಲ್ಲಿ ಇದ್ದಾರೆ ಎನ್ನತಕ್ಕಂಥದ್ದು ಕೂಡ ನಮಗೆ ಅರಿವು ಇಲ್ಲ. ದಯಮಾಡಿ, ಮಾನ್ಯ

ಸಚಿವರನ್ನು ವಿನಂತಿಸಿಕೊಳ್ಳುತ್ತೇನೆ, ಈ ರಾಜ್ಯದಲ್ಲಿ, ತಾಲ್ಲೂಕು ಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಎಷ್ಟು ಸಾವಿರ ಜನ ಬೀದಿ ಮಕ್ಕಳಿದ್ದಾರೆ? ಎಷ್ಟು ಜನ ಈ ರೀತಿಯ ಜೀವನವನ್ನು ಮಾಡುತ್ತಿದ್ದಾರೆ? ಎಷ್ಟು ಸಾವಿರ ಜನರಿಗೆ ನೀವು ರಿ–ಹ್ಯಾಬಿಲಿಟೇಷನ್ ಮಾಡಿದ್ದೀರಿ? ಆಶ್ರಯ ಇರಬಹುದು, ಆಹಾರ ಇರಬಹುದು ಏನು ಶಿಕ್ಷಣ ಕೊಟ್ಟಿದ್ದೀರಿ ಅನ್ನತಕ್ಕಂಥದ್ದು ಬಹಳ ಮುಖ್ಯ. ಎಸ್‌ಎಸ್‌ಎಲ್‌ಸಿ ಶಿಕ್ಷಣ ಕೊಟ್ಟಿದ್ದೀರಾ? ಡಿಪ್ಲೋಮಾ ಶಿಕ್ಷಣ ಕೊಟ್ಟಿದ್ದೀರಾ? ಪೋಸ್ಟ್ ಗ್ರಾಜ್ಯುಯೇಷನ್ ಶಿಕ್ಷಣ ಕೊಟ್ಟಿದ್ದೀರಾ? ಅದನ್ನು ಯಾವ ರೀತಿಯಾಗಿ ಅವರಿಗೆ ಕೊಟ್ಟು, ಯಾವ ಮಟ್ಟದಲ್ಲಿ ಅವರಿಗೆ ಅನುಕೂಲವನ್ನು ಮಾಡಿದ್ದೀರಿ ಎನ್ನುವಂಥ ಸರಿಯಾದ ಮಾಹಿತಿ ನಮಗೆ ಸಿಕ್ಕಿಲ್ಲ. ಬಹಳ ಮುಖ್ಯವಾಗಿ, ನಾವು ಬೆಳಗ್ಗೆ ಐದೂವರೆ, ಆರು ಗಂಟೆಗೆ ಹೋದರೆ ಅವರುಗಳು ಕಾಣಲು ಸಿಗುತ್ತಾರೆ. ಇವರು ನಾವೆಲ್ಲಾ ರೀ-ಹ್ಯಾಬಿಲಿಟೇಶನ್ ಮಾಡಿದ್ದೇವೆ, ಬೆಗ್ಗರ್ಸ್ ಕಾಲೋನಿ ಇಟ್ಟಿದ್ದೇವೆಂದು ಹೇಳುತ್ತಿದ್ದಾರೆ. ಆದರೆ ಇವತ್ತೂ ಸಹ ಬೆಳಿಗ್ಗೆ ಐದೂವರೆ, ಆರು ಗಂಟೆಗೆ ನೀವು ವಾಕ್ ಹೋದರೆ, ನೂರಾರು ಜನ ಮಕ್ಕಳು ಹೆಣ್ಣಿರಬಹುದು, ಗಂಡಿರಬಹುದು, ಅವರೆಲ್ಲರೂ ಸಹ ಚಿಂದಿ ಆಯ್ದು, ಪೇಪರ್ ಆಯ್ದು, ಹಿಂದೆ ಒಂದು ಬ್ಯಾಗ್ ತಗುಲಿಹಾಕಿಕೊಂಡು ಜೀವನ ಮಾಡತಕ್ಕಂಥ ಸಾವಿರಾರು ಜನ ಇವತ್ತು ನಗರದಲ್ಲಿದ್ದಾರೆ, ಜಿಲ್ಲಾ ಮಟ್ಟದಲ್ಲಿದ್ದಾರೆ ಮತ್ತು ತಾಲ್ಲೂಕು ಮಟ್ಟದಲ್ಲಿದ್ದಾರೆ. ಅವರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎನ್ನುವುದನ್ನು ದಯಮಾಡಿ ತಿಳಿಸಬೇಕೆಂದು ಹೇಳುತ್ತಾ, ಇನ್ನು, ಭಿಕ್ಷೆ ಬಗ್ಗೆ ಸಹ ಹೇಳಿದ್ದಾರೆ. ಏನು ಕೇಂದ್ರ ಸಿಬ್ಬಂದಿ, ಪೊಲೀಸ್‌ನವರು ದಸ್ತಗಿರಿ ಮಾಡುತ್ತಾರೆ, ಆದರೆ ದಸ್ತಗಿರಿ ಮಾಡಿ ಏನು ಮಾಡುತ್ತಾರೆನ್ನತಕ್ಕಂಥದ್ದರ ಬಗ್ಗೆ ಮಾಹಿತಿ ಇಲ್ಲ. ದಸ್ತಗಿರಿ ಮಾಡಿ ಅವರನ್ನು ಎಲ್ಲೆಲ್ಲಿ ಇಟ್ಟುಕೊಂಡಿದ್ದಾರೆ? ಎಷ್ಟು ಜನರನ್ನು ದಸ್ತಗಿರಿ ಮಾಡಿದ್ದಾರೆ? ಏತಕ್ಕೆ ಮಾಡಿದ್ದಾರೆಂಬುದು ನಮಗೆ ಮಾಹಿತಿ ಸರಿಯಾಗಿ ಸಿಕ್ಕಿಲ್ಲ. ಅವರಿಗೆ ಕೊಡತಕ್ಕಂಥ ಎಜ್ಯುಕೇಷನ್ ಏನು? ಅವರಿಗೆ ಏನಾದರೂ ರೀಹ್ಯಾಬಿಲಿಟೇಷನ್ ಮಾಡಿದ್ದಾರಾ? ಅವರನ್ನು ಏನಾದರೂ ಮಾರ್ಪಡು ಮಾಡಲಿಕ್ಕೆ ಸರ್ಕಾರ ಚಿಂತನೆ ಮಾಡಿರುವುದರ ಬಗ್ಗೆ ನಮಗೆ ಸರಿಯಾದ ಮಾಹಿತಿಯನ್ನು ಸರ್ಕಾರ ಕೊಡಿಸಿಲ್ಲ. ಮತ್ತೊಂದು ಕಡೆ ಹೇಳುತ್ತಾರೆ, ಉದ್ಯೋಗ ತರಬೇತಿ ಯೋಜನೆ ಮಾಡಿದ್ದೇವೆ ಎಂದು ಯಾವ ಉದ್ಯೋಗ ಬಗ್ಗೆ, ಯಾವ ತರಬೇತಿಯಯನ್ನು ಕೊಡುತ್ತಾರೆ? ಜೆಒಸಿ ಕೊಡುತ್ತಿದ್ದಾರಾ? ಯವ ಉದ್ಯೋಗ ಕೊಡುತ್ತಾರಾ? ಮತ್ತೆ ಏನಾದರೂ ಪೇಪರ್ ಹೊರುವಂಥ ಉದ್ಯೋಗ ಕೊಡುತ್ತಾರಾ? ಅಥವಾ ಬೀದಿಯಲ್ಲಿ ಚಿಂದಿ ಆಯುವ ಕೆಲಸ ಕೊಡುತ್ತಾರಾ? ಇದರ ಬಗ್ಗೆ ಸರಿಯಾದ ಮಾಹಿತಿ ಇಲ್ಲ, ದಯಮಾಡಿ ಅದನ್ನು ಸನ್ಮಾನ್ಯ ಸಚಿವರು ಸದನಕ್ಕೆ ತಿಳಿಸಬೇಕೆಂದು ಕೋರುತ್ತೇನೆ,

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವಂಥ ಪ್ರಶ್ನೆಗೆ ಬೆಂಗಳೂರು ನಗರದಲ್ಲಿ ನಮೀಕ್ಷೆಯಾಗಿರುವುದರಿಂದ ಈ ಒಂದು ಅಂಕಿಅಂಶವನ್ನು ನಾವು ಕೊಟ್ಟಿದ್ದೇವೆ. ಇದು ಕೇಂದ್ರ ಸರ್ಕಾರದ ಯೋಜನೆ. ಇತರೆ ಜಿಲ್ಲೆಗಳಲ್ಲಿ ಸಮೀಕ್ಷೆ ನಡೆದಿರುವುದಿಲ್ಲ. ಹೀಗಾಗಿ ಇಂಥ ಒಂದು ಕೇಂದ್ರ ಸರ್ಕಾರದ ಯೋಜನೆಯಲ್ಲಿ ಆರು ಸ್ವಯಂ ಸೇವಾ ಸಂಸ್ಥೆಗಳು ಇಂಥ ಕಾರ್ಯಕ್ರಮವನ್ನು ಮಾಡುತ್ತಿವೆ. ಒಂದು ಸಂಸ್ಥೆಗೆ ಸುಮಾರು

13 ಲಕ್ಷದ 40 ಸಾವಿರ ರೂಪಾಯಿಗಳ ಹಣವನ್ನು ಕೇಂದ್ರ ಸರ್ಕಾರ ಕೊಡುತ್ತದೆ, ಇದರಲ್ಲಿ 90 ಪರ್ಸೆಂಟ್ ಕೇಂದ್ರ ಸರ್ಕಾರದಿಂದ ಬಂದರೆ 10 ಪರ್ಸೆಂಟ್‌ನ್ನು ಸ್ವಯಂ ಸೇವಾ ಸಂಸ್ಥೆಗಳು ತುಂಬಬೇಕಾಗುತ್ತದೆ. ಈ ಒಂದು ಸ್ವಯಂ ಸೇವಾ ಸಂಸ್ಥೆಗಳಲ್ಲಿ 300 ಜನರಿಗೆ ಅವಕಾಶ ಇರುತ್ತದೆ. ಹೀಗಾಗಿ ಈ ಆರು ಸಂಸ್ಥೆಗಳು ಧಾರವಾಡ, ದಾವಣಗೆರೆ, ಬೆಂಗಳೂರು ಬೀದರ್, ಹಾವೇರಿ ಮತ್ತು ಶಿವಮೊಗ್ಗ, ಈ ಭಾಗಗಳಲ್ಲಿ ಆರು ಸ್ವಯಂ ಸೇವಾ ಸಂಸ್ಥೆಗಳು ಇಂಥ ಕಾರ್ಯಕ್ರಮವನ್ನು ನಡೆಸುತ್ತಿವೆ. ಈ ಸಂಸ್ಥೆಗಳಲ್ಲಿರುವ ಮಕ್ಕಳ ಸಂಖ್ಯೆ 1541. ಇಲ್ಲಿ ವಸತಿ, ಶಿಕ್ಷಣ, ಮಕ್ಕಳಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಸ್ವಯಂ ಸೇವಾ ಸಂಸ್ಥೆಗಳು ಕಲ್ಪಿಸಿ ಕೊಟ್ಟಿವೆ. 216 ಮಕ್ಕಳಿಗೆ ಆರು ಸಂಸ್ಥೆಗಳಿಂದ ಉದ್ಯೋಗ ಕಲ್ಪಿಸಿಕೊಡಲಾಗಿದೆ. 484 ಮಕ್ಕಳು ತರಬೇತಿ ಪಡೆಯುತ್ತಿದ್ದಾರೆ. 450 ಜನ ತಂದೆ–ತಾಯಿಗಳೊಂದಿಗೆ ವಾಪಸ್ ಹೋಗಿದ್ದಾರೆ. ಇನ್ನು ಉಳಿದಿರತಕ್ಕಂಥ ವಿಚಾರವನ್ನು ಮಾನ್ಯ ಸದಸ್ಯರು ಕೇಳಿದ್ದಾರೆ, ಎಷ್ಟು, ಏನು, ಯಾವ ತರಹ ತರಬೇತಿ ಎಂದು ಇವುಗಳ ಬಗ್ಗೆ ಮಾಹಿತಿಯನ್ನು ಕೇಳಿದ್ದಾರೆ. ಆ ಮಾಹಿತಿ ಸಧ್ಯಕ್ಕೆ ನನ್ನ ಹತ್ತಿರ ಇಲ್ಲ, ನಾನು ಈ ಒಂದು ವರದಿಯನ್ನು ತರಿಸಿ ಕೊಡುತ್ತೇನೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಇದು ಕೇವಲ 5 ಜಿಲ್ಲೆಗೆ ನಗರಕ್ಕೆ ಸೀಮಿತವಾದ ವಿಚಾರವೆ? ಕೇಂದ್ರ ಸರ್ಕಾರದವರು ಈ 5 ಜಿಲ್ಲೆಗೆ ಮಾತ್ರ ಅಲ್ಲ. ಇಡೀ ರಾಜ್ಯಕ್ಕೆ ಅವರು ಅನುದಾನವನ್ನು ಕೊಡಲು ಸಮರ್ಥರಿದ್ದಾರೆ. ಏಕೆ ಎಲ್ಲಾ ಜಿಲ್ಲೆಗಳಿಗೆ ಇದನ್ನು ವಿಸ್ತರಣೆ ಮಾಡಿಲ್ಲ ಎಂಬುದು ನಮ್ಮ ಮೂಲಭೂತವಾದ ಪ್ರಶ್ನೆ. ಕೇವಲ 5 ಭಾಗಗಳದ್ದು ಮಾತ್ರ ಕೊಟ್ಟಿದ್ದಿರಿ, ಅದು ಯಾವ್ಯಾವು ಎನ್ನುವುದು ಕೂಡ ನನಗೆ ಮಾಹಿತಿ ಇಲ್ಲ. ಅವರ ಪ್ರಕಾರ 17,685 ಬೆಂಗಳೂರು ನಗರದಲ್ಲಿ ಎಂದು ಹೇಳುತ್ತಾರೆ, ಇನ್ನು ಬೀದರ್, ಗುಲ್ಬರ್ಗಾ, ರಾಯಚೂರು, ಅಂತ ಈಗೇನು ಆರು ಸಂಸ್ಥೆಗಳೆಂದು ಹೇಳಿದರು, ಅದರ ಪ್ರಕಾರ ಆ ಜಿಲ್ಲೆಗಳಲ್ಲಿ ಎಷ್ಟೆಷ್ಟು ಜನ ಈ ಮಕ್ಕಳು ಇದ್ದಾರೆ ಎನ್ನುವ ಮಾಹಿತಿ ನೀಡಿಲ್ಲ. ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡುವುದು ಇಷ್ಟೆ. ಈ ಒಂದು ಸ್ಕೀಂ ಅನ್ನು ಇಡೀ ರಾಜ್ಯದಲ್ಲಿ ಎಲ್ಲಾ ಜಿಲ್ಲೆಗಳಿಗೂ ವಿಸ್ತರಣೆ ಮಾಡಿದರೆ ಬಹಳ ಉತ್ತಮ, ಎಲ್ಲಾ ಜಿಲ್ಲೆಗಳಲ್ಲೂ ಈ ವ್ಯವಸ್ಥೆ ಇದೆ, ಬೀದಿ ಮಕ್ಕಳು ಚಿಂದಿ ಆಯ್ದು ಜೀವನ ಮಾಡುತ್ತಾರೆ, ಅದಕ್ಕೆ ಸರ್ಕಾರದ ವತಿಯಿಂದ ತಮ್ಮ ಪ್ರಯತ್ನ ಏನು ಎಂದು ಕೇಳುತ್ತೇನೆ? ತಾವು ಏನಾದರೂ ಪ್ರಯತ್ನ ಮಾಡಿದ್ದಾರೆ ಅದರ ಬಗ್ಗೆ ಮಾಹಿತಿ ಕೊಡಿ, ಇಲ್ಲದಿದ್ದರೆ ಕೇಂದ್ರ ಸರ್ಕಾರದ ಜೊತೆ ಚರ್ಚಿಸಿ ಅಥವಾ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ ಈ ಸ್ಕೀಂ ಅನ್ನು ಪ್ರತಿಯೊಂದು ಜಿಲ್ಲೆಗೆ, ಪ್ರತಿಯೊಂದು ತಾಲ್ಲೂಕಿಗೂ ಸಹಿತ ವಿಸ್ತರಣೆ ಮಾಡುವುದು ಬಹಳ ಉತ್ತಮ. 13 ಲಕ್ಷ ರೂ. ಹಣವನ್ನು ಬಿಡುಗಡೆ ಮಾಡಿರುವುದರ ಬಗ್ಗೆ ಏನು ಹೇಳಿದ್ದಾರೆ, ಯಾವುದಕ್ಕೋಸ್ಕರ ಬಿಡುಗಡೆ ಮಾಡಿದ್ದಾರೆ ಎನ್ನುವ ಮಾಹಿತಿ ಸಹ ನಮಗೆ ದೊರಕಿಲ್ಲ. ಅಥವಾ ಅವರು ಮಕ್ಕಳಿಗೇನಾದರೂ ಇಷ್ಟಿಷ್ಟು ಎಂದು ಕೊಡುತ್ತಾರೆ? ಅಥವಾ ಇವರೇ ಊಟ ಹಾಕುತ್ತಾರಾ? ಇವರೇ ಅವರಿಗೆ ಯಾವರೀತಿ ಸೌಲಭ್ಯವನ್ನು ಕೊಡುತ್ತಾರೆ ಎನ್ನುವ ಮಾಹಿತಿ ಕೂಡ ನಮಗೆ ಇಲ್ಲ. ಅದನ್ನು ದಯಮಾಡಿ ಈ ಸದನಕ್ಕೆ ತಿಳಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ಸನ್ಮಾನ್ಯ ಸಭಾಧ್ಯಕ್ಷರೇ ನಾನು ಈಗಾಗಲೇ ಹೇಳಿದೆ, ಇದು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯತಕ್ಕಂಥದ್ದು ಎಂದು. ಇಡೀ ರಾಜ್ಯದಲ್ಲಿ ಯಾರು ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡು ನಮಗೆ ಸಬ್‌ಮಿಟ್ ಮಾಡಿದರೆ ನಾವು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುತ್ತೇವೆ. ಈ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡತಕ್ಕಂಥದ್ದು ಏನಿದೆ ಪ್ರತಿಯೊಂದು ಸೌಲಭ್ಯವನ್ನು ಕೊಡಲಿಕ್ಕಾಗಿಯೇ ಹಣ ಬಿಡುಗಡೆ ಮಾಡುತ್ತಾರೆ. ಅವರೇನು ಉಳಿದ ವಿಚಾರಗಳನ್ನು ಹೇಳಿದ್ದಾರೆ, ಅದರ ವರದಿಯನ್ನು ನಾನು ತರಿಸಿ ಕೊಡುತ್ತೇನೆ.

ಶ್ರೀ ಎಂ.ಟಿ. ಕೃಷ್ಣಪ್ಪ : ಇದನ್ನು ಎಲ್ಲಾ ಜಿಲ್ಲೆಗಳಿಗೆ ವಿಸ್ತರಣೆ ಮಾಡಲಿಕ್ಕೆ ಏನು ಸಮಸ್ಯೆ ಇದೆ? ಇದು ಕೇವಲ 5 ಜಿಲ್ಲೆಗಳಿಗೆ ಸೀಮಿತವಾದಂಥ ಅಥವಾ ನಗರಗಳಿಗೆ ಸೀಮಿತವಾದಂಥ ವಿಚಾರಧಾರೆಯಲ್ಲ. ಇದು ಇಡೀ ರಾಜ್ಯದಲ್ಲಾಗಿರತಕ್ಕಂಥ ಸಮಸ್ಯೆ. ಹೀಗಾಗಿ ಪ್ರತಿಯೊಂದು ಜಿಲ್ಲೆಗೂ ಈ ಸ್ಕೀಂ ಅನ್ನು ವಿಸ್ತರಣೆ ಮಾಡುವುದಕ್ಕೆ ಸರ್ಕಾರಕ್ಕೆ ಇರತಕ್ಕಂಥ ತೊಂದರೆ ಏನು ಎಂಬುದೇ ನಮ್ಮ ಮೂಲಭೂತವಾದ ಪ್ರಶ್ನೆ.

ಶ್ರೀಮತಿ ಭಾಗೀರಥಿ ಮರುಳಸಿದ್ದನಗೌಡ : ನಾನು ಆವಾಗಿನಿಂದ ಹೇಳುತ್ತಿದ್ದೇನೆ. ಇದು ಸ್ವಯಂ ಸೇವಾ ಸಂಸ್ಥೆಗಳಿಗೆ ದೊರೆಯತಕ್ಕಂಥ ಕಾರ್ಯಕ್ರಮ ಮತ್ತು ಇದು ಕೇಂದ್ರ ಸರ್ಕಾರದ ಯೋಜನೆ. ಒಂದುವೇಳೆ ಬೇರೆ ಜಿಲ್ಲೆಯವರು ಇದಕ್ಕೆ ಅಪ್ಲಿಕೇಷನ್ ಹಾಕಿಕೊಂಡರೆ ನಾನು ರೆಕಮೆಂಡ್ ಮಾಡಿ ಕಳುಹಿಸಿಕೊಡುತ್ತೇನೆ, ತದನಂತರ ಆ ಕಾರ್ಯಕ್ರಮ ಆ ಸಂಸ್ಥೆಗೆ ಬರುತ್ತದೆ.

ಸಂಕೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಪಾವತಿಸಬೇಕಾದ ಹಣ

609(6538) : ಶ್ರೀ ಶಶಿಕಾಂತ್ ಅಕ್ಕಪ್ಪ ನಾಯಕ (ಹುಕ್ಕೇರಿ) ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಸಹಕಾರ ಸಕ್ಕರೆ ಕಾರ್ಖಾನೆಯಲ್ಲಿ 2002–03, 2003–04 ಹಾಗೂ 2004–05ರಿಂದ ರೈತರಿಗೆ ಕಬ್ಬಿನ ಬಿಲ್, ಎನ್.ಎಸ್.ಸಿ. ಮರು ಪಾವತಿ ಹಾಗೂ ಕಾರ್ಮಿಕರಿಗೆ ವೇತನ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಸಕ್ಕರೆ ಕಾರ್ಖಾನೆಯ ಲಾಭ ನಷ್ಟವೇನು;

ಈ) ನಷ್ಟವಾದಲ್ಲಿ ಕಾರಣವೇನು;

ಉ) ಸಕ್ಕರೆ ಕಾರ್ಖಾನೆಗೆ ಸಂಬಂಧಿಸಿದಂತೆ ಸಾಲವಿದೆಯೇ;

ಊ) ಹಾಗಿದ್ದಲ್ಲಿ ಕಾರಣವೇನು; ಇದರಿಂದ ರೈತರ ಅಭಿವೃದ್ಧಿಗೆ ತೊಂದರೆಯುಂಟಾಗುವುದಿಲ್ಲವೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು):

ಅ) ಹೌದು.

ಕಾರ್ಖಾನೆಯು ಪಾವತಿಸಬೇಕಾದ ಮೊತ್ತದ ವಿವರಗಳು ಕೆಳಕಂಡಂತಿದೆ.

1. 2002–03ನೇ ಸಾಲಿನ ಎಸ್.ಎಂ.ಪಿ. ದರದ ಪ್ರಕಾರ ರೂ. 1511.03 ಲಕ್ಷ ಪಾವತಿಸಬೇಕಾಗಿರುತ್ತದೆ.
2. 2004–05ನೇ ಸಾಲಿನ ಕಬ್ಬಿನ ಬಿಲ್ ಬಾಕಿಯನ್ನು ಈಗಾಗಲೇ ಪಾವತಿಸಲಾಗಿದೆ.